ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

<u>ಸಿ.ಸಿ. ಸಂಖ್ಯೆ:**123/2016**</u>

ಚಾಸಾಃ 5 ಫ್ರಾಸಾಃ4

| | | |
|---|---|---|
| ಹೆಸರು | : | ತಿಮ್ಮರಾಜು |
| ಗಂಡನ/ತಂದೆಯ ಹೆಸರು | : | ಕಾಡೇಗೌಡ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಗುಡ್ಡೆ ತಿಮ್ಮಸಂದ್ರ ಗ್ರಾಮ. |

<u>ದಿನಾಂಕ **03.12.2024** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ಆರೋಪಿತರು ಗೊತ್ತು. ಚಾಸಾ-**1** ರಿಂದ ಚಾಸಾ 4 ರವರ ಪರಿಚಯವಿದೆ.

ದಿಃ**12.02.2016** ರಂದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಯ ಪ್ರಯುಕ್ತ ಹಿಂದಿನ ದಿನ ರಾತ್ರಿ **8.30** ಗಂಟೆಯ ಸಮಯದಲ್ಲಿ ಮತಯಾಚನೆ ಮಾಡಲು ನಾನು, ಚಾಸಾ **1** ರಿಂದ **4** ರವರು ಹುಚ್ಚಮ್ಮನ ದೇವಸ್ಥಾನದ ಹತ್ತಿರ ಮತಯಾಚನೆ ಮಾಡುವ ಸಮಯದಲ್ಲಿ ಆರೋಪಿತರು ಎಲ್ಲರೂ ಅಲ್ಲಿಗೆ ಬಂದು ಕಾಂಗ್ರೆಸ್ ಪರ ಮತಯಾಚನೆ ಮಾಡುತ್ತಿದ್ದೀರಾ ಯೋಗೇಶ್ ನಮ್ಮ ಊರಿಗೆ ಏನು ಮಾಡಿದ್ದಾರೆಂದು ಸೂಳೆಮಕ್ಕಳಾ, ಬೋಳಿಮಕ್ಕಳಾ ಎಂದು ನಮ್ಮನ್ನು ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆ. ಆಗ ಚಾಸಾ**1** ರವರು ಯಾಕೆ ಹೀಗೆ ಬೈಯುತ್ತಿದ್ದೀರಾ ಎಂದು ಕೇಳಿದಾಗ **1** ನೇ ಆರೋಪಿಯು ಕೈಯಿಂದ ಚಾಸಾ-**1** ರವರ ಮುಖದ ಮೇಲೆ ಹೊಡೆದಿರುತ್ತಾರೆ. **2** ಮತ್ತು **3** ನೇ ಆರೋಪಿತರು ಇಟ್ಟಿಗೆ ತೆಗೆದುಕೊಂಡು ಚಾಸಾ**1** ರವರ ಮುಖ ಹಾಗೂ ತಲೆಗೆ ಹೊಡೆದಿರುತ್ತಾರೆ. ಎಲ್ಲಾ ಆರೋಪಿತರು ಕೈಗಳಿಂದ ಚಾಸಾ**1** ರವರಿಗೆ

ಹೊಡೆದಿರುತ್ತಾರೆ. ಚಾಸಾ-2 ರವರು ಜಗಳ ಬಿಡಿಸಲು ಹೋದಾಗ ಅವರಿಗೂ ಸಹ ಆರೋಪಿತರು ಹಲ್ಲೆ ಮಾಡಿರುತ್ತಾರೆ. ನಂತರ ನಾವೆಲ್ಲರೂ ಜಗಳ ಬಿಡಿಸಿದಾಗ 2 ನೇ ಆರೋಪಿಯು ಚಾಸಾ1 ರವರನ್ನು ಉದ್ದೇಶಿಸಿ ಚಾಸಾ1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಚಾಸಾ1 ರವರಿಗೆ ಹೊಡೆದ ಇಟ್ಟಿಗೆ ಚೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇಟ್ಟಿಗೆ ಚೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ.

ಮರುದಿನ ಪೋಲಿಸರು ಹುಚ್ಚಮ್ಮನ ದೇವಸ್ಥಾನ ಬಳಿ ಬಂದಿದ್ದು, ಬೆಳಗ್ಗೆ 10.30-11.30 ಗಂಟೆಯ ಸಮಯದಲ್ಲಿ ಮಹಜರ್ ಕ್ರಮ ಕೈಗೊಂಡಿರುತ್ತಾರೆ ಅಲ್ಲಿ ನಾನು ಹಾಜರಿದ್ದು, ನಾನು ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಮಹಜರ್ ಕಾಲದಲ್ಲಿ ಪೋಲಿಸರು ಇಟ್ಟಿಗೆ ಚೂರುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಕೆ ಆರ್ ವಕೀಲರಿಂದಃ</u>

ಗಲಾಟೆ ನಡೆದ ಸಮಯದಲ್ಲಿ ನಮ್ಮ ಹೊರತುಪಡಿಸಿ ಊರಿನ ಗ್ರಾಮದವರು ಇದ್ದರು. ಚಾಸಾ-1 ರವರು ಕಾಂಗ್ರೆಸ್ ಪಕ್ಷಕ್ಕೆ ಸಂಬಂದಪಟ್ಟಿದ್ದು ಅವರಿಗೆ ಅನುಕೂಲವಾಗಲೀ ಎಂದು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ನಮ್ಮ ಊರಿನಲ್ಲಿ ನಾವು ಪ್ರಬಲವಾಗಿ ಪೈಪೋಟಿ ಇರುವುದರಿಂದ ಆರೋಪಿತರು ಮತದಾನ ಕೇಳುತ್ತಾರೆಂದು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಚಾಸಾ-1 ರಿಂದ 6 ರವರು ಒಂದೇ ಪಕ್ಷಕ್ಕೆ ಸೇರಿದವರು ಎಂದರೆ ನಿಜ. ಮಹಜರ್ ಗೆ ಬರುವಂತೆ ಪೋಲಿಸರು ನೋಟೀಸ್ ಕೊಟ್ಟಿಲ್ಲ. ಪೋಲಿಸರು ಮಹಜರ್ ಮಾಡಲು ಸ್ಥಳಕ್ಕೆ ಬಂದಿಲ್ಲ, ಮಹಜರ್ ಮಾಡಿಲ್ಲ ಎಂದರೆ ಸುಳ್ಳು. ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತು

ಪಡಿಸಿಕೊಂಡಿಲ್ಲ ಎಂದರೆ ಸುಳ್ಳು. ಮು ಮಾ 1 ರಂತಹ ಇಟ್ಟಿಗೆ ಸಾಮಾನ್ಯವಾಗಿ ಊರಿನಲ್ಲಿ ಸಿಗುತ್ತವೆ ಎಂದರೆ ನಿಜ. ಈ ಕೇಸಿಗೋಸ್ಕರ ಮು ಮಾ 1 ಅನ್ನು ಸೃಷ್ಟಿ ಮಾಡಿದ್ದೇನೆಂದರೆ ಸುಳ್ಳು. ಆರೋಪಿತರು ಬೈದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸುಳ್ಳು. ಇತ್ತೀಚೆಗೆ ಚುನಾವಣೆಯಾದ ನಂತರ ನಾವು ಮತ್ತು ಆರೋಪತರು ಮಾತನಾಡುತ್ತೇವೆ ಎಂದರೆ ನಿಜ.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.